**ಓ ಎಸ್ ನಂಃ 224/2021**
**ಪಿ ಡಬ್ಲ್ಯೂ ಃ 2**

**ದಿಃ 09.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಪಿ ವಿ ವಕೀಲರಿಂದಃ-**

ಈ ದಾವೆಯನ್ನು ಯಾರು ಯಾರ ವಿರುದ್ದ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಹೆಣ್ಣು ಮಕ್ಕಳುಗಳು ಭಾಗ ಬೇಕೆಂದು ಈ ದಾವೆಯನ್ನು ಸಲ್ಲಿಸಿದ್ದಾರೆ. ಅವರುಗಳ ಹೆಸರು ಹೊಂಬಾಳಮ್ಮ, ತೊಳಚಮ್ಮ ಮತ್ತು ಶಾರದಮ್ಮ. 1 ನೇ ವಾದಿ ತಮ್ಮ ಹೆಂಡತಿ ಎಂದರೆ ಸರಿ. ತಮ್ಮ ಮತ್ತು 1 ನೇ ವಾದಿಯ ನಡುವೆ ಮದುವೆ ಸುಮಾರು 50 ವರ್ಷಗಳ ಹಿಂದೆ ಆಗಿದೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ನಡುವೆ ಏನು ವ್ಯವಹಾರ ನಡೆದಿದೆ ಎಂಬ ವಿಚಾರ ತಮಗೆ ಗೊತ್ತು ಎಂದರೆ ಸರಿಯಲ್ಲ. ವಾದಿಗಳು ಅವರವರ ಮದುವೆ ಆದ ನಂತರ ಅವರವರ ಗಂಡನ ಮನೆಗಳಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಪ್ರತಿವಾದಿಗಳು ಎಲ್ಲರು ಸಹ ಅವರವರ ಮದುವೆಗಳು ಆದ ನಂತರ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸರಿ. ವಾದಿಗಳು ಯಾವ ಸರ್ವೆ ನಂ. ಸ್ವತ್ತುಗಳಿಗೆ ಸಂಬಂದಪಟ್ಟಂತೆ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ವಿಭಾಗದ ವಿಚಾರವಾಗಿ ತಾವು ಯಾವಾಗ ಪಂಚಾಯತಿ ಮಾಡಿದ್ದೀರಿ ಎಂದರೆ ಸಾಕ್ಷಿಯು 2021 ನೇ ಸಾಲಿನಲ್ಲಿ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಿಗೆ ಸಂಬಂದಪಟ್ಟಂತೆ 2020 ನೇ ಸಾಲಿಗಿಂತ ಪೂರ್ವದಲ್ಲಿ ವಿಭಾಗ ಆಗಿದ್ದು ಅವರವರೇ ಅವರ ಹಿಸ್ಸೆಗೆ ಅನುಗುಣವಾಗಿ ಸ್ವಾಧೀನಾನುಭದಲ್ಲಿದ್ದಾರೆ ಎಂದರೆ ಸರಿಯಲ್ಲ. ಗುಡಿಯಪ್ಪ, ನಾರಾಯಣಪ್ಪ. ರಾಜಮ್ಮರವರ ಹಿಸ್ಸೆಗೆ ಬಂದಿರುವ ಅನುಸಾರವಾಗಿ ಅವರವರೆ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸದರಿರವರು ಅವರವರ ಹೆಸರಿಗೆ ಪ್ರತ್ಯೇಕವಾಗಿ ಖಾತೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅಜ್ಜೇಗೌಡ, ಚೆನ್ನಪ್ಪ, ಬಲರಾಮಣ್ಣ, ನರಸಿಂಹಯ್ಯ ಮತ್ತು ರಮೇಶ್ ರವರು ಯಾವ ಗ್ರಾಮದ ವಾಸಿಗಳು ಎಂದರೆ ಸಾಕ್ಷಿಯು ತಲಚಗುಪ್ಪೆ ಗ್ರಾಮದ ವಾಸಿಗಳು ಎಂದು ನುಡಿಯುತ್ತಾರೆ. ವಾದಿಗಳು ತಮ್ಮ ಸಮ್ಮುಖದಲ್ಲಿ ಗುಡಿಯಪ್ಪನವರಿಗೆ ದಾವಾ ಸ್ವತ್ತುಗಳಲ್ಲಿ ಭಾಗ ಕೊಡಿ ಎಂದು ಕೇಳಿದ್ದಾರ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ರಾಜಮ್ಮ, ನಾರಾಯಣಪ್ಪ, ಗಂಗಮ್ಮನವರನ್ನು ವಾದಿಗಳು ತಮ್ಮ ಸಮಕ್ಷಮದಲ್ಲಿ ಅವರನ್ನು ಕುರಿತು ದಾವಾ ಸ್ವತ್ತುಗಳಲ್ಲಿ ಭಾಗ ಕೊಡಬೇಕೆಂದು ಕೇಳಿದ್ದಾರ ಎಂದರೆ

**ಓ ಎಸ್ ನಂಃ 224/2021**
**ಪಿ ಡಬ್ಲ್ಯೂ ಃ 2**

ಸಾಕ್ಷಿಯು ಕೇಳಿದ್ದಾರೆ ಎಂದು ನುಡಿಯುತ್ತಾರೆ. 1 ನೇ ವಾದಿಯು ತಮ್ಮ ಹೆಂಡತಿ ಆಗಿರುವ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ತಾವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂದಪಟ್ಟಂತೆ ವಿಭಾಗ ಆಗಿರುವ ವಿಚಾರ ಗೊತ್ತಿದ್ದರು ಸಹ ತಾವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**

**ಓ ಎಸ್ ನಂಃ 224/2021**
**ಪಿ ಡಬ್ಲ್ಯು ಃ 3**

**ದಿಃ 09.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಪಿ ವಿ ವಕೀಲರಿಂದಃ-**

ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತೇನೆ. ತಾವು ಮೊದಲು ಬೆಂಗಳೂರಿನಲ್ಲಿ ವಾಸವಾಗಿದ್ದೀರಿ ಎಂದರೆ ಸರಿ. ಆನಂತರ ನಾನು ತಗಚಗುಪ್ಪೆ ಗ್ರಾಮದಲ್ಲಿ ವಾಸವಾಗಿದ್ದೇನೆ. ನಾನು ಬೆಂಗಳೂರಿನಿಂದ ತಗಚಗುಪ್ಪೆ ಗ್ರಾಮಕ್ಕೆ 2002 ನೇ ಸಾಲಿನಲ್ಲಿ ಬಂದಿರುತ್ತೇನೆ. ಈ ದಾವೆಯನ್ನು ಹೊಂಬಾಳಮ್ಮ ಸಲ್ಲಿಸಿರುತ್ತಾರೆ, ಉಳಿದ ವಾದಿಗಳ ಹೆಸರು ನನಗೆ ಗೊತ್ತಿಲ್ಲ. ವಾದಿಗಳು ಈ ದಾವೆಯಲ್ಲಿ ಏನು ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಅವರ ತಂದೆ ತಾಯಿಗಳ ಆಸ್ತಿಗಳಿಗೆ ಸಂಬಂಧಪಟ್ಟಂತೆ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಸರ್ವೆ ನಂ.ಗಳು ತಮಗೆ ಗೊತ್ತಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಹೇಳಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ವರ್ಷ ಮತ್ತು ಯಾವ ದಿನಾಂಕದಂದು ಪಂಚಾಯತಿ ನಡೆದಿದೆ ಎಂದರೆ ಸಾಕ್ಷಿಯು ಈಗ ದಿನಾಂಕ ನನಗೆ ನೆನಪಿಲ್ಲ ಆದರೆ ಏಪ್ರಿಲ್ ಮಾಹೆ 2021 ನೇ ಸಾಲಿನಲ್ಲಿ ಪಂಚಾಯತಿ ನಡೆದಿರುತ್ತದೆ. ಪಂಚಾಯತಿದಾರರನ್ನು ಹೊರತು ಪಡಿಸಿ ಯಾರು ಯಾರನ್ನು ಭಾಗ ಕೇಳಲು ಬಂದಿದ್ದರು ಎಂದರೆ ಸಾಕ್ಷಿಯು ಹೆಣ್ಣು ಮಕ್ಕಳು ಅವರ ಸಹೋದರರ ಬಳಿ ಭಾಗ ಕೇಳಲು ಬಂದಿದ್ದರು ಎಂದು ನುಡಿಯುತ್ತಾರೆ. ತಾವು ಯಾವುದೇ ಪಂಚಾಯತಿಯನ್ನು ಮಾಡಿರುವುದಿಲ್ಲ ಪಂಚಾಯತಿಯಲ್ಲಿ ವಾದಿಗಳು ಗುಡಿಯಪ್ಪನವರಿಗೆ ದಾವಾ ಸ್ವತ್ತುಗಳಲ್ಲಿ ಭಾಗ ಕೊಡಿ ಎಂದು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಾದ ಗುಡಿಯಪ್ಪ, ರಾಜಮ್ಮ ಮತ್ತು ನಾರಾಯಣಪ್ಪರವರು ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸರಿ. ದಾವ ಸ್ವತ್ತುಗಳಲ್ಲಿ ಗುಡಿಯಪ್ಪ, ರಾಜಮ್ಮ ಮತ್ತು ನಾರಾಯಣಪ್ಪರವರು ಪ್ರತ್ಯೇಕವಾಗಿ ವ್ಯವಸಾಯಗಳನ್ನು ಮಾಡುತ್ತಿದ್ದಾರೆ ಎಂದರೆ ಸರಿ. ಗುಡಿಯಪ್ಪ, ರಾಜಮ್ಮ ಮತ್ತು ನಾರಾಯಣಪ್ಪರವರ ನಡುವೆ ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ಭಾಗ ಆಗಿದ್ದರು ಸಹ ತಾವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಗಳ ಹೇಳಿಕೆಯ ಮೇರೆಗೆ ತಾವು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಓ ಎಸ್ ನಂಃ 224/2021
ಪಿ ಡಬ್ಲ್ಯೂ ಃ 3

ಪಾಟೀ ಸವಾಲುಃ ಪ್ರತಿವಾದಿ 1, 3 ರಿಂದ 6 ಮತ್ತು ಅವರ ಪರ ವಕೀಲರು ಗೈರು ಹಾಜರಾಗಿದ್ದು ಪಾಟೀ ಸವಾಲನ್ನು ಮುಂದೂಡಲು ಸೂಕ್ತ ಕಾರಣ ಇಲ್ಲದ ಕಾರಣ ಪ್ರತಿವಾದಿ 1, 3 ರಿಂದ 6 ರ ಪರವಾಗಿ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

ಮರು ವಿಚಾರಣೆ ಇಲ್ಲ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.